

# ಶರ್ಮಿಳಾ

## ಪವರ್‌ಫುಲ್ ಪಾತ್ರದ ಸೆಳೆತ

'ನಟಿಯಾಗಿ ಬಂದ ಆರಂಭದ ಕೆಲವು ವರ್ಷಗಳಲ್ಲಿ, ಸಿನಿಮಾದಲ್ಲಿ ನನಗೆ ಎಷ್ಟು ಸೀನ್‌ಗಳು ಸಿಕ್ಕವು, ಸ್ಕ್ರೀನ್ ಮೇಲೆ ನಾನು ಎಷ್ಟು ಅವಧಿ ಕಾಣಿಸಿಕೊಂಡೆ ಎಂಬುದನ್ನಷ್ಟೇ ಗಮನಿಸುತ್ತಿದ್ದೆ. ಸಿನಿಮಾದಲ್ಲಿ ನನ್ನನ್ನಷ್ಟೇ ನೋಡಿಕೊಳ್ಳುತ್ತಿದ್ದೆ. ಆದರೆ ನಿರ್ಮಾಪಕಿಯಾಗಿ ಬದಲಾದ ಮೇಲೆ ನನ್ನ ದೃಷ್ಟಿಕೋನವೂ ಬದಲಾಗಿದೆ. ಸಿನಿಮಾ ಸ್ಕ್ರಿಪ್ಟ್ ಉತ್ತಮವಾಗಿದೆಯೇ? ಒಟ್ಟಾರೆ ಸಿನಿಮಾ ಆಗಿ ನೋಡಿದರೆ ಪ್ರಭಾವಶಾಲಿಯಾಗಿದೆಯೇ? ಎಂಬ ಪ್ರಶ್ನೆಗಳನ್ನು ಕೇಳಿಕೊಳ್ಳುತ್ತೇನೆ' ಎಂದಿದ್ದಾರೆ ನಟಿ ಶರ್ಮಿಳಾ ಮಾಂಡ್ರೆ.

ದರ್ಶನ್ ಅಭಿನಯಿಸಿರುವ 'ಡೆವಿಲ್' ಸಿನಿಮಾ ಡಿಸೆಂಬರ್ 11ಕ್ಕೆ ಬಿಡುಗಡೆಯಾಗುತ್ತಿದ್ದು, ಶರ್ಮಿಳಾ ಕೂಡ ಸಿನಿಮಾದಲ್ಲಿದ್ದಾರೆ. ಈ ಹಿನ್ನೆಲೆಯಲ್ಲಿ 'ಡೆವಿಲ್' ಸಿನಿಮಾ ಹಾಗೂ ಚಿತ್ರೀಕರಣದ ಅನುಭವಗಳನ್ನು ಹಂಚಿಕೊಂಡಿದ್ದಾರೆ.

''ನವಗ್ರಹ' ಸಿನಿಮಾ ನಂತರ ದರ್ಶನ್ ಜೊತೆಗೆ ನಾನು ನಟಿಸಿದ ಎರಡನೇ ಸಿನಿಮಾ 'ಡೆವಿಲ್'. 18 ವರ್ಷದ ನಂತರ ಈ ಸಿನಿಮಾಗೆ ಮತ್ತೆ ಸೇರಿದೆವು. ಆದರೆ ಇಷ್ಟು ವರ್ಷಗಳಲ್ಲಿ ಏನೂ ಬದಲಾಗಿಲ್ಲ ಎನಿಸಿತು. 'ನವಗ್ರಹ' ಸಿನಿಮಾ ನಿನ್ನೆ ಮೊನ್ನೆ ಆದಂತೆ ಅನ್ನಿಸುತ್ತಿದೆ. ಡೆವಿಲ್‌ನಲ್ಲಿ ನನ್ನ ಪಾತ್ರ ಪವರ್‌ಫುಲ್ ಆಗಿದೆ'' ಎಂದು ವಿವರಿಸಿದ್ದಾರೆ.

ದೊಡ್ಡ ಬಜೆಟ್, ದೊಡ್ಡ ಬ್ಯಾನರ್‌ನ ಸಿನಿಮಾಗಳಲ್ಲಿ ಕಡಿಮೆ ಸ್ಕ್ರೀನ್ ಟೈಂ ಇರುವ ಪಾತ್ರಗಳನ್ನು ಮಾಡಲು ಕೆಲವು ನಟ ನಟಿಯರಿಗೆ ಹಿಂಜರಿಕೆ. ಆದರೆ ತಮಗೆ ಸ್ಕ್ರೀನ್ ಟೈಮ್‌ಗಿಂತ ಪಾತ್ರದ ತೂಕವೇ ಮುಖ್ಯ ಎಂಬುದನ್ನು ಪುನರುಚ್ಚರಿಸಿದ್ದಾರೆ ಶರ್ಮಿಳಾ.

ನಿರ್ಮಾಪಕಿಯಾಗಿ ಪಡೆದುಕೊಂಡ ಅನುಭವ ಅವರ ಆಯ್ಕೆಯನ್ನು ಇನ್ನಷ್ಟು ಹರಿತಗೊಳಿಸಿದೆಯಂತೆ. ಸಿನಿಮಾದಲ್ಲಿ ದೃಶ್ಯಗಳು ಪವರ್‌ಫುಲ್ ಆಗಿದ್ದರೆ ಚಿಂತಿಸುವ ಅಗತ್ಯವಿಲ್ಲ. ಪ್ರತಿಯೊಂದರ ಕೇಂದ್ರಬಿಂದುವಾಗಬೇಕು ಎಂದು ಬಯಸಬೇಕಿಲ್ಲ. ಕಲಾವಿದರು ಪ್ರೇಕ್ಷಕರ ದೃಷ್ಟಿಕೋನದಲ್ಲಿ ಯೋಚಿಸಬೇಕು' ಎಂದಿದ್ದಾರೆ.

ನಟ ಶಿವರಾಜ್‌ಕುಮಾರ್ ಅವರೊಂದಿಗೆ 'ಡ್ಯಾಡ್' ಸಿನಿಮಾದಲ್ಲಿ ನಟಿಸುತ್ತಿರುವ ಶರ್ಮಿಳಾ, ಗಮನಸೆಳೆಯುವಂಥ, ಹೊಸ ಧಾಟಿಯ ಪಾತ್ರಗಳಲ್ಲಿ ತಮ್ಮನ್ನು ಪ್ರಯೋಗಿಸಿಕೊಳ್ಳಲು ಸಿದ್ಧವಿರುವುದಾಗಿ ಹೇಳಿದ್ದಾರೆ. ■

## ಹೊಸ ಶೇಡ್‌ನಲ್ಲಿ ಶ್ರೀನಗರ ಕಿಟ್ಟಿ

'ವೇಷಗಳು' ಸಿನಿಮಾದಲ್ಲಿ ಬಸಮ್ಮ ಹಾಗೂ ಬಸಪ್ಪ ಎಂಬ ಎರಡು ಗೆಟಪ್‌ಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ ನಟ ಶ್ರೀನಗರ ಕಿಟ್ಟಿ. ರವಿ ಬೆಳಗೆರೆಯವರ ಕಥೆಯನ್ನು ಸ್ಫೂರ್ತಿಯಾಗಿಸಿಕೊಂಡು 'ವೇಷಗಳು' ಸಿನಿಮಾ ಮೂಡಿಬರುತ್ತಿದ್ದು, ಚಿತ್ರೀಕರಣ ಈಗಾಗಲೇ ಆರಂಭಗೊಂಡಿದೆ. ಕಿಶನ್ ರಾವ್ ದಳವಿ ನಿರ್ದೇಶನವನ್ನು ಕೈಗೆತ್ತಿಕೊಂಡಿದ್ದಾರೆ. ಶ್ರೀನಗರ ಕಿಟ್ಟಿ, ಅಂಕಿತಾ ಅಮರ್ ಹಾಗೂ ಭರತ್ ಭೂಪಣ್ಣ ಮುಖ್ಯಭೂಮಿಕೆಯಲ್ಲಿದ್ದಾರೆ.

ಈ ಸಿನಿಮಾ ಹಾಗೂ ತಮಗೆ ಕೊಟ್ಟಿರುವ ಎರಡು ರೀತಿಯ ಪಾತ್ರಗಳ ಬಗ್ಗೆ ಕುತೂಹಲ ತುಂಬಿಕೊಂಡೇ ಅಡಿಯಿಟ್ಟಿದ್ದಾರೆ ಕಿಟ್ಟಿ. 'ಸಿನಿಮಾ ಕಥೆ ಚಿಕ್ಕದು. ಆದರೆ ಹಲವು ಪದರಗಳನ್ನು ತೆರೆದಿಡುವಂಥದ್ದು. 2000ರ ಇಸವಿಯಲ್ಲಿ, ಅಂದರೆ ಸುಮಾರು ಎರಡು ದಶಕಗಳ ಕೆಳಗೆ ರಂಗತಂಡಗಳು ಹೇಗೆ ಕೆಲಸ ನಿರ್ವಹಿಸುತ್ತಿದ್ದವು, ಹೇಗೆ ತಮ್ಮ ನಾಟಕಗಳ ಮೂಲಕ ಕಥೆಗಳನ್ನು ಪಸರಿಸುತ್ತಿದ್ದರು ಎಂಬುದನ್ನು ತೋರಿಸುತ್ತದೆ. ನಾನು ಎರಡು ಶೇಡ್‌ಗಳಲ್ಲಿ ನಟಿಸುತ್ತಿದ್ದೇನೆ. ಈ ರೀತಿ ಎರಡು ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿರುವುದು ಹೊಸ ಅನುಭವ. ಸಿನಿಮಾದಲ್ಲಿ ಜೋಗತಿಯಾಗಿ ಬಣ್ಣ ಹಚ್ಚಿದ್ದೇನೆ' ಎಂದು ತಮ್ಮ ಪಾತ್ರದ ಬಗ್ಗೆ ಮಾತನಾಡಿದ್ದಾರೆ ಶ್ರೀನಗರ ಕಿಟ್ಟಿ.

'ರಂಗಭೂಮಿಯ ಒಳಹರಿವುಗಳು ಹೇಗಿರುತ್ತವೆ, ಅಲೆಮಾರಿ ತಂಡಗಳು ಯಾವ ರೀತಿ ಇರುತ್ತವೆ ಎಂಬುದನ್ನು ಚಿತ್ರದಲ್ಲಿ ಹೇಳುತ್ತಿದ್ದೇವೆ. ಎರಡು ದಶಕಗಳ ಹಿಂದಿನ ರಂಗಭೂಮಿ, ಅಲ್ಲೊಂದು ಪ್ರೇಮಕಥೆಯೂ ಸಾಗುತ್ತದೆ. ಇದು ಹೊಸ ರೀತಿಯ ಪ್ರಯತ್ನ' ಎಂದು ಮತ್ತಷ್ಟು ಮಾತು ಪೋಣಿಸಿದರು.



ಈ ಸಿನಿಮಾ, ರಂಗಭೂಮಿ ಕಲಾವಿದರು ಹಾಗೂ ಜೋಗತಿಯರ ಜೀವನಶೈಲಿಯನ್ನೂ ಒಳಗೊಂಡಿದೆ. ಚಿತ್ರದಲ್ಲಿ ಶೇಕಡ 50ರಷ್ಟು ನಾಟಕದ ಸನ್ನಿವೇಶಗಳು ಬರುತ್ತವೆ' ಎಂದು ಮಾಹಿತಿ ನೀಡಿದ್ದಾರೆ. ■